ವಿಷಯ :- ಬೆಳಗಾಂ ಜಿಲ್ಲೆಯಲ್ಲಿ ದೇವಸ್ಥಾನಗಳಿಗೆ ಹಣ ಬಿಡುಗಡೆ.

ಪ್ರಶ್ನೆಯ ಸಂಖ್ಯೆ 228 (1359) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1359

ಶ್ರೀ ಪ್ರಕಾಶ್ ಹುಕ್ಕೇರಿ (ಸದಲಗ) :- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994-95 ಮತ್ತು 1995-96 ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯಿಂದ ಬೆಳಗಾವಿ ಜಿಲ್ಲೆಯ ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

ಆ) 1994-95 ಮತ್ತು 1995-96 ನೇ ಸಾಲಿಗೆ ಮಂಜೂರಾದ ಹಣದಲ್ಲಿ ಇದುವರೆಗೆ ಬಿಡುಗಡೆ ಮಾಡಿದ ಹಣವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

ಇ) ಇದುವರೆಗೆ ಬಿಡುಗಡೆ ಮಾಡಿದ ಹಣದಲ್ಲಿ ಖರ್ಚಾಗದೇ ಉಳಿದಿರುವ ಹಣವೆಷ್ಟು? ಹಣ ಖರ್ಚಾಗದೆ ಇರಲುಕಾರಣಗಳೇನು? (ತಾಲ್ಲೂಕುವಾರು ದೇವಸ್ಥಾನಗಳ ಹೆಸರುಗಳೊಂದಿಗೆ ವಿವರ ನೀಡುವುದು)

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :-

ಅ) 1994-95 ರಲ್ಲಿ ರೂ 14,05,000-00 1995-96 ರಲ್ಲಿ ರೂ 24,16,000-00 (ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ)

ಆ) 1994-95 ರಲ್ಲಿ ನೀಡಿದ ಹಣದಲ್ಲಿ ರೂ 11,45,000-00 ಗಳನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಬಿಡುಗಡೆ ಮಾಡಿರುತ್ತೆ. 1995-96 ರಲ್ಲಿ ನೀಡಿದ ಹಣ ಸಂಬಂಧಿಸಿದ ಸಂಸ್ಥೆಗಳಿಗೆ ಬಿಡುಗಡೆಯಾಗಿಲ್ಲ.

ಇ) ರೂ 2,60,000-00 ಉಳಿದಿದೆ. ಅನುದಾನ ಮಂಜೂರಾದ ಸಂಸ್ಥೆಗಳವರು ಅವಶ್ಯ ದಾಖಲೆಗಳನ್ನು ಒದಗಿಸದಿರುವುದೇ ಇದಕ್ಕೆ ಕಾರಣ. ತಾಲ್ಲೂಕುವಾರು ವಿವರ ಅನುಬಂಧದಲ್ಲಿ ಕೊಟ್ಟಿದೆ.

ಶ್ರೀ ಪ್ರಕಾಶ್ ಹುಕ್ಕೇರಿ :- ಮಾನ್ಯ ಸಭಾಧ್ಯಕ್ಷರೇ, ಬೆಳಗಾವಿ ಜಿಲ್ಲೆಗೆ 1994-95 ನೇ ಸಾಲಿನಲ್ಲಿ ಒಟ್ಟು 38 ಲಕ್ಷ 66 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಆದರೆ 38 ಲಕ್ಷ 66 ಸಾವಿರ ರೂಪಾಯಿಗಳಲ್ಲಿ ಬೈಲಹೊಂಗಲ ಕ್ಷೇತ್ರಕ್ಕಾಗಿ 94-95 ನೇ ಸಾಲಿನಲ್ಲಿ 3 ಲಕ್ಷ 98 ಸಾವಿರ 1995-96 ನೇ ಸಾಲಿನಲ್ಲಿ 4 ಲಕ್ಷ 60 ಸಾವಿರ ಹೀಗೆ ಒಟ್ಟು 9 ಲಕ್ಷ 30 ಸಾವಿರ ರೂಪಾಯಿ ಬೈಲಹೊಂಗಲ ಒಂದೇ ಕ್ಷೇತ್ರಕ್ಕೆ ಹಣವನ್ನು ಖರ್ಚು ಮಾಡಲಾಗಿದೆ. ಬೆಳಗಾವಿ ಜಿಲ್ಲೆಯ 10 ತಾಲ್ಲೂಕುಗಳು ಇವೆ. ಉದಾಹರಣೆಗೆ ಖಾನಾಪುರ ತಾಲ್ಲೂಕಿಗೆ 1994-95 ನೇ ಸಾಲಿನಲ್ಲಿ 20 ಸಾವಿರ ರೂಪಾಯಿ ಮಂಜೂರು ಮಾಡಲಾಗಿದೆ, 1995-96 ನೇ ಸಾಲಿಗೆ 50 ಸಾವಿರ ರೂಪಾಯಿ ಮಂಜೂರು ಮಾಡಲಾಗಿದೆ. ಆದರೆ ಖಾನಾಪುರ ತಾಲ್ಲೂಕಿಗೆ 70 ಸಾವಿರ ರೂಪಾಯಿ, ಆದೇ ಬೈಲಹೊಂಗಲ ತಾಲ್ಲೂಕಿಗೆ 9 ಲಕ್ಷ 30 ಸಾವಿರ ರೂಪಾಯಿ ಮಂಜೂರು ಮಾಡಲಾಗಿದೆ. ಇನ್ನೊಂದು ಉದಾರಣೆ ಕೊಡುತ್ತಿದ್ದೇನೆ. ರಾಯಭಾಗ್ ತಾಲ್ಲೂಕಿಗೆ 1994-95 ನೇ ಸಾಲಿನಲ್ಲಿ 25 ಸಾವಿರ ರೂಪಾಯಿ, 1995-96 ನೇ ಸಾಲಿಗೆ 50 ಸಾವಿರ ರೂಪಾಯಿ ಮಂಜೂರು ಮಾಡಲಾಗಿದೆ. ಒಟ್ಟು 75 ಸಾವಿರ ರೂಪಾಯಿಗಳನ್ನು ತಾವು ರಾಯಭಾಗ್ ತಾಲ್ಲೂಕಿಗೆ ಕೊಡುತ್ತಿದ್ದೀರಿ. ಇದರಿಂದ ಬೆಳಗಾವಿ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಕೊಡುವುದು, ಇನ್ನೊಂದು ತಾಲ್ಲೂಕಿಗೆ 25 ಸಾವಿರ ರೂಪಾಯಿ, 50 ಸಾವಿರ 9 ಲಕ್ಷ ರೂಪಾಯಿ ಕೊಡುತ್ತಿದ್ದೀರಿ ಎಂಬುದನ್ನು ತಾವು ದಯವಿಟ್ಟು ಹೇಳಬೇಕು. ಎರಡನೆಯದು ತಾವೇನು 2 ಲಕ್ಷ 60 ಸಾವಿರ ರೂಪಾಯಿಗಳು ಮಾತ್ರ ಮುಜರಾಯಿ ಇಲಾಖೆಯಲ್ಲಿ ಉಳಿತಾಯ ಆಗಿದೆ ಎಂದು ಹೇಳಿದ್ದೀರಿ. ಆದರೆ ನಾನು ಇವತ್ತು ತಮಗೆ 1983 ರಿಂದ 1994-95 ನೇ ಸಾಲಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ 44 ಲಕ್ಷ 83 ಸಾವಿರ ರೂಪಾಯಿ ಹಣ ಖರ್ಚಾಗದೇ ಇರುವ ಬಗ್ಗೆ ಸ್ಟೇಟ್‌ಮೆಂಟ್ ಆಫ್ ಮೈಸೂರಿನ ಲಿಸ್ಟ್ ಬೆಳಗಾಂ ಛಾರಿಟಿ ಕಮೀಷನರ್ ಆಫಿಸಿನಲ್ಲಿ ತೆಗೆದುಕೊಂಡು ಬಂದಿದ್ದೇನೆ. 44 ಲಕ್ಷ ರೂಪಾಯಿ 1983 ರಿಂದ 1994-95 ನೇ ಸಾಲಿನ ವರೆಗೆ ಖರ್ಚಾಗಿದೆ. ಆದ್ದರಿಂದ ದಯವಿಟ್ಟು ಈ ಹಣವನ್ನು ತಾವು ಏಕೆ ಖರ್ಚು ಮಾಡಲಿಲ್ಲ? ಅದೇನು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ? ಇದನ್ನು ದಯವಿಟ್ಟು ತಾವು ಹೇಳಬೇಕು. ಈ ಹಣ ಖರ್ಚಾಗುವ ಸಲುವಾಗಿ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ?

ಉಪಾಧ್ಯಕ್ಷರು :- ತಾವು ಪ್ರಶ್ನೆ ಕೇಳಿ, ಭಾಷಣ ಮಾಡುವ ಹಾಗೆ ಇಲ್ಲ. ಏನು ಇದೆ ಎಂದು ಕೇಳಿ, ಸಚಿವರು ಉತ್ತರ ಹೇಳುತ್ತಾರೆ, ತಾವು ಕೂಡಿ.

ಶ್ರೀ ಆರ್. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಕಾರ 1994-95 ನೇ ಸಾಲಿನಲ್ಲಿ 14 ಲಕ್ಷ ಬಿಡುಗಡೆ ಮಾಡಿದ್ದೇವೆ. ಮತ್ತು 1995-96 ನೇ ಸಾಲಿನಲ್ಲಿ ಕೂಡ 24 ಲಕ್ಷ ರೂಪಾಯಿ 16 ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದೇವೆ. ತಾಲ್ಲೂಕುವಾರು ಪಟ್ಟಿಯನ್ನು ಅವರಿಗೆ ಲಗತ್ತಿಸಿಕೊಟ್ಟಿದ್ದೇವೆ. ಮತ್ತೆ ಇನ್ನೂ ಅವರು ಬಿಡುಗಡೆ ಆಗಲಾರದ ಹಣ ಇದೆ ಎಂಬ ಪ್ರಶ್ನೆಗೆ ಅದು

ಏನು ಅಂದರೆ ಆಯಾಯ ಸದಸ್ಯರು ಎಸ್ಟಿಮೇಟ್ ಮತ್ತು ದಾಖಲೆಗಳನ್ನು ನಮ್ಮ ಆಫೀಸಿಗೆ ಮುಟ್ಟಿಸಿರುವುದಿಲ್ಲ. ಆ ಕಾರಣ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ಅದಕ್ಕೆ ತಾವು ವಿವರ ಕೊಟ್ಟರೆ...

ಉಪಾಧ್ಯಕ್ಷರು :- ಅವರು ಕೇಳುವುದು ಇಂಬ್ಯಾಲೆನ್ಸ್ ಆಗಿದೆ ಎಂದು, ಅದನ್ನು ಸರಿ ಮಾಡುತ್ತೇವೆಂದು ಹೇಳಿ.

ಶ್ರೀ ಆರ್. ಕೃಷ್ಣಪ್ಪ :- ಯಾವ್ಯಾವ ತಾಲ್ಲೂಕಿನಲ್ಲಿ ಅಸ್ತವ್ಯಸ್ತ ಆಗಿದ್ದರೂ ಅದನ್ನು ಮುಂದೆ ನಾನು ಪರಿಶೀಲಿಸಿ, ಹಿಂದೆ ಏನು ಆಗಿದೆ ಈ ಸಲ ಆಗಲಾರದ ಹಾಗೆ ನೋಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಡಿಸ್ಟ್ರಿಮಿನೇಷನ್ ಮಾಡುವುದು ಮಾಡಿದ್ದೀರಿ ಉಪಾಧ್ಯಕ್ಷರು ಕಾನ್ಸ್ಟಿಟ್ಯುಯೆನ್ಸಿಗೂ ಮಾಡಬೇಕಾ? ನಮಗೆ ಮಾಡಿದರೆ ಪರವಾಗಿಲ್ಲ.

ಉಪಾಧ್ಯಕ್ಷರು :- ಯಾರದೇ ಕಾನ್ಸ್ಟಿಟ್ಯುಯೆನ್ಸಿ ಇರಲಿ ಮಾಡಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಡೆಪ್ಯುಟಿ ಸ್ಪೀಕರ್ ಕಾನ್ಸ್ಟಿಟ್ಯುಯೆನ್ಸಿಗೂ ಅನ್ಯಾಯ ಮಾಡಿದರೆ ಇದು ಹೇಗೆ? ನ್ಯಾಯ ಹೇಗೆ ದೊರಕುತ್ತದೆ?

ಶ್ರೀ ಆರ್. ಕೃಷ್ಣಪ್ಪ :- ಎಲ್ಲಾ ಕಡೆ ಈ ರೀತಿಯಲ್ಲಿ ಆಗುವುದಿಲ್ಲ. ನಾನು ಎಲ್ಲಾ ಕಡೆ ಸಮನಾಗಿ ಹಂಚಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪ್ರಕಾಶ್ ಹುಕ್ಕೇರಿ :- 44 ಲಕ್ಷ ರೂಪಾಯಿ ಹಣ ಖರ್ಚಾಗದೆ, ಮುಜರಾಯಿ ಇಲಾಖೆಯಲ್ಲಿ ಉಳಿದಿದೆ. ನಮ್ಮದು ಲಿಸ್ಟ್ ಕೊಡುತ್ತಾರೆ ಎರಡು ಲಕ್ಷ 60 ಸಾವಿರ ಮಾತ್ರ ಉಳಿದಿದೆ ಎಂದು.

ಉಪಾಧ್ಯಕ್ಷರು :- ಅದರ ಸಲುವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಪ್ರಕಾಶ್ ಹುಕ್ಕೇರಿ :- 44 ಲಕ್ಷ ರೂಪಾಯಿ ಉಳಿದಿದೆ ಅದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ದಯವಿಟ್ಟು ಹೇಳಬೇಕು. ಏಕೆಂದರೆ 1983 ರಿಂದ ಆ ಹಣ ಖರ್ಚಾಗದೇ ಅಲ್ಲೇ ಉಳಿದಿದೆ 1983 ರಿಂದ ನಾನು ವಿವರ ಕೊಡುತ್ತೇನೆ, ಪ್ರತಿ ವರ್ಷ ಎಷ್ಟೆಷ್ಟು ಹಣ ಖರ್ಚಾಗಿದೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಉಳಿದಿದೆ ಎಂದು ಲಿಸ್ಟ್ ಕೊಡುತ್ತೇನೆ. ದಯವಿಟ್ಟು ಅದನ್ನು ತರಿಸಿ ಕೊಂಡು ಖರ್ಚು ಮಾಡುವ ಹಾಗೆ ವ್ಯವಸ್ಥೆ ಮಾಡಬೇಕು.

ಶ್ರೀ ಆರ್. ಕೃಷ್ಣಪ್ಪ :- ಸನ್ಮಾನ್ಯ ಉಪಾಧ್ಯಕ್ಷರೇ, ಸರಿ ಮಾಡಲು ಪ್ರಯತ್ನ ಮಾಡಲಿಕ್ಕೆ ಅಲ್ಲ, ಏಕೆ ಹಣ ಉಳಿದಿದೆ ಎಂದರೆ ಕೆಲವು ಸದಸ್ಯರು ಪ್ಲಾನ್‌ನ್ನು ಮತ್ತು

ಎಸ್ಟಿಮೇಟನ್ನು ಕೊಟ್ಟಿರುವುದಿಲ್ಲ. ಅವರಿಗೆ ಜಮಾ ಆಗಿರುತ್ತದೆ. ಅದು ಕೊಟ್ಟ ತಕ್ಷಣ ಖರ್ಚಾಗುತ್ತದೆ. ನಮ್ಮ ಜನರಿಗೆ ಬಂದಿದ್ದು ಎರಡು ಲಕ್ಷ 60 ಸಾವಿರ ಮಾತ್ರ ಬಂದಿದೆ. ಅದನ್ನು ಗಮನಿಸಿ ಸರಿಪಡಿಸಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

ಉಪಾಧ್ಯಕ್ಷರು :- ಅವರು ಸರಿ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಪ್ರಕಾಶ್ ಹುಕ್ಕೇರಿ :- ನಾನು ನಿಮಗೆ ಇಯರ್‌ವೈಸ್ ಹೇಳುತ್ತೇನೆ.

ಉಪಾಧ್ಯಕ್ಷರು :- ಆಗಲೇ ಹೇಳಿದ್ದೀರಿ ಮತ್ತೇನು ಹೇಳುತ್ತೀರಿ?

ಶ್ರೀ ಪ್ರಕಾಶ್ ಹುಕ್ಕೇರಿ :- ಅವರು ಎರಡು ಲಕ್ಷ 60 ಸಾವಿರ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು :- ವಿವರ ತರಿಸಿ, ಎಸ್ಟಿಮೇಟ್ ಪ್ಲಾನ್ ಆಗಿದ್ದನ್ನು ತರಿಸಿ ನಾನು ಸರಿ ಮಾಡುತ್ತೇನೆಂದು ಹೇಳಿದ್ದಾರಲ್ಲ.

ವಿಷಯ :- ರಾಜ್ಯದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆಯಾಗಿರುವ ಹಣ.

ಪ್ರಶ್ನೆಯ ಸಂಖ್ಯೆ 229 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ (1679)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1995-96 ನೇ ಸಾಲಿನಲ್ಲಿ ದೇವಸ್ಥಾನಗಳ ನವೀಕರಣಕ್ಕಾಗಿ ಮಂಜೂರಾದ ಒಟ್ಟು ಅನುದಾನವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಅನುದಾನವನ್ನು ಯಾವ ಆಧಾರದ ಮೇಲೆ ನೀಡಲಾಗುವುದು; ವಿವರ (ನೀಡುವುದು)

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :-

ಅ) ರೂ. 2.06 ಕೋಟಿ (ಜಿಲ್ಲಾವಾರು ತಃಖ್ತೆ ಲಗತ್ತಿಸಿದೆ)

ಆ) ದೇವಾಲಯಗಳ ದುರಸ್ಥಿಯ ಬಗ್ಗೆ ಸರ್ಕಾರದ ಮುಂದಿರುವ ಬೇಡಿಕೆ ಮತ್ತು ಹಣದ ಲಭ್ಯತೆಗಳನ್ನು ಪರಿಗಣಿಸಿ ನೀಡಲಾಗುವುದು.